[redacted]

# ಕರ್ನಾಟಕ ರಾಜ್ಯಪತ್ರ


ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ಪತ್ರಿಕೆ**

| ಭಾಗ - IVA | ಬೆಂಗಳೂರು, ಶುಕ್ರವಾರ, ಮೇ ೨, ೨೦೦೩ (ವೈಶಾಖ ೧೨, ಶಕ ವರ್ಷ ೧೯೨೫) | ನಂ. ೪೬೮ |
|---|---|---|


## ಶಿಕ್ಷಣ ಸಚಿವಾಲಯ

## ಸುತ್ತೋಲೆ

ಸಂಖ್ಯೆ: ಇಡಿ:117:ಪಿಜಿಸಿ:2003, ಬೆಂಗಳೂರು, ದಿನಾಂಕ 28ನೇ ಏಪ್ರಿಲ್ 2003

ವಿಷಯ:- ಮಾನ್ಯತೆ ಪಡೆದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಂತಿಗೆ ವಸೂಲಾತಿಯನ್ನು ತಡೆಗಟ್ಟುವ ಬಗ್ಗೆ.

ಪ್ರಸ್ತುತ ವರ್ಷದ, ಅಂದರೆ, 2003-04ನೇ ವರ್ಷದ ಶಾಲಾ ದಾಖಲಾತಿಗಳು ಆರಂಭವಾಗಿವೆ. ಮಾನ್ಯತೆ ಪಡೆದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ದಾಖಲಾತಿಗಳೂ ಸಹ ನಡೆಯುತ್ತಿವೆ. ಈ ಶಾಲೆಗಳು ದಾಖಲಾತಿಗಾಗಿ ವಂತಿಗೆಯನ್ನು ಪಾವತಿ ಮಾಡಬೇಕೆಂದು ಪೋಷಕರನ್ನು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

2. ವಂತಿಗೆಯ ವಸೂಲಾತಿಯನ್ನು ಕಾನೂನಿನ ಅನ್ವಯ ನಿಷೇಧಿಸಲಾಗಿದೆ. ಅದಕ್ಕೆ ಸಂಬಂಧಿಸಿದ ಉಪಬಂಧಗಳ ಉದ್ಧೃತ ಭಾಗವನ್ನು ಈ ಸುತ್ತೋಲೆಗೆ ಲಗತ್ತಿಸಿದೆ. ಆ ಉಪಬಂಧಗಳ ಅನ್ವಯ, ಇತರೇ ವಿಷಯಗಳ ಜೊತೆಗೆ, ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳು ವಂತಿಗೆಯನ್ನು (ಅದನ್ನು ಯಾವುದೇ ಹೆಸರಿನಲ್ಲಿ ಕರೆಯುತ್ತಿದ್ದರೂ) ವಸೂಲಿ ಮಾಡುವಂತಿಲ್ಲ. ಸರ್ಕಾರ ನಿಗದಿಪಡಿಸಿದ ಬಾಬ್ತುಗಳಿಗಾಗಿ ಹಾಗೂ ಅವುಗಳಿಗಾಗಿ ನಿಗದಿಪಡಿಸಿದ ದರಗಳಲ್ಲಿ ಮಾತ್ರ ಶುಲ್ಕವನ್ನು (fees) ವಸೂಲಿ ಮಾಡತಕ್ಕದ್ದೆಂದೂ ಸಹ ಸದರಿ ಉಪಬಂಧಗಳ ಅನ್ವಯ ವಿಧಿಸಲಾಗಿದೆ.

3. ಈ ಸುತ್ತೋಲೆಗೆ ಲಗತ್ತಿಸಿದ ಅನುಬಂಧದಲ್ಲಿ ಉಲ್ಲೇಖಿಸಿದ 1995ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಕ್ರಮಬದ್ಧತೆ ಹಾಗೂ ಪಠ್ಯಕ್ರಮ ಇತ್ಯಾದಿಯ ನಿಗದೀಕರಣ), ನಿಯಮಗಳ ನಿಯಮ 15 ಮತ್ತು 16ರ ಪ್ರಕಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿಯೊಂದು ಜಿಲ್ಲೆಗಾಗಿ ಪ್ರಾಧಿಕಾರ ಒಂದನ್ನು ರಚಿಸಲಾಗಿದೆ. ನಿಗದಿಪಡಿಸಿದ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ವಂತಿಗೆ ಇತ್ಯಾದಿಯ ರೂಪದಲ್ಲಿ ಯಾವುದೇ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆ ಅದಕ್ಕೆ ಪಾವತಿ ಮಾಡಬೇಕೆಂದು ಕೇಳಿದಲ್ಲಿ, ಅಂತಹ ಪ್ರಕರಣದಲ್ಲಿ, ಸದರಿ ನಿಯಮಗಳ ನಿಯಮ 16ರಡಿ ರಚಿಸಲಾದ ಜಿಲ್ಲಾ ಮಟ್ಟದ ಶಿಕ್ಷಣ ಕ್ರಮಬದ್ಧತೆ ಪ್ರಾಧಿಕಾರ ಅಥವಾ ಹೆಚ್ಚುವರಿ ಕ್ರಮಬದ್ಧತೆ ಪ್ರಾಧಿಕಾರಕ್ಕೆ ದೂರು ನೀಡಲು ಆಸ್ಪದ ಇರುತ್ತದೆ. ಅಂತಹ ದೂರಿನ ಆಧಾರದ ಮೇಲೆ ಅಥವಾ ತಾವೇತಾವಾಗಿ (suo Motu) ಸದರಿ ಪ್ರಾಧಿಕಾರ ತನಿಖೆಯನ್ನು ನಡೆಸಿ ಸಂಬಂಧಿಸಿದ ಸಂಸ್ಥೆಯ ವಿರುದ್ಧ ಆದೇಶ ನೀಡಲು ಅಧಿಕಾರ ಹೊಂದಿರುತ್ತದೆ.

4. ಸದರಿ ಪ್ರಾಧಿಕಾರಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ವಿಶೇಷವಾಗಿ, ತಾವೇ ತಾವಾಗಿ (suo-motu) ಕ್ರಮ ತೆಗೆದುಕೊಳ್ಳಲು ಲಭ್ಯ ಇರುವ ಅಧಿಕಾರವನ್ನು ಸದರಿ ಪ್ರಾಧಿಕಾರಗಳು ಚಲಾಯಿಸುತ್ತಿಲ್ಲ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

5. ವಂತಿಗೆಯ ವಸೂಲಿಯನ್ನು ತಡೆಗಟ್ಟಬೇಕೆಂದು ಹಾಗೂ ಅದನ್ನು ವಸೂಲಿ ಮಾಡುವ (ಮಾನ್ಯತೆ ಪಡೆದ) ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಮಾನುಸಾರ ಶಿಕ್ಷಿಸಿ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಅದರಿಂದ ಆಗುತ್ತಿರುವ ತೊಂದರೆಯನ್ನು ನಿವಾರಿಸಬೇಕೆನ್ನುವುದು ಸರ್ಕಾರದ ಆದ್ಯತೆ ಆಗಿದೆ. ಈ ಹಿನ್ನೆಲೆಯಲ್ಲಿ, ಸದರಿ ಪ್ರಾಧಿಕಾರಗಳಿಗೆ ತಾವೇ ತಾವಾಗಿ (suo motu) ಕ್ರಮ ತೆಗೆದುಕೊಳ್ಳಲು ಲಭ್ಯವಿರುವ ಅಧಿಕಾರವನ್ನು ಚಲಾಯಿಸಬೇಕೆಂದು ಈ ಮೂಲಕ ಸೂಚಿಸಿದೆ. ಇದಕ್ಕಾಗಿ, ಪ್ರಾಧಿಕಾರದ ಅಧ್ಯಕ್ಷರುಗಳಾದ ಜಿಲ್ಲಾಧಿಕಾರಿಗಳು ಮತ್ತು ಸದಸ್ಯ ಕಾರ್ಯದರ್ಶಿಗಳಾದ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳು ವಿಶೇಷ ಆಸಕ್ತಿ ವಹಿಸಿ, ತಕ್ಷಣ ಕ್ರಮ ಆರಂಭಿಸಬೇಕೆಂದು ಸೂಚಿಸಿದೆ.

6. ತೆಗೆದುಕೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ಅಂದರೆ, ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಇವರಿಗೆ, ವರದಿಯನ್ನು ನೀಡತಕ್ಕದೆಂದು ಸಹ ಸೂಚಿಸಿದೆ.

ಎ.ಪಿ. ಜೋಷಿ
ಸರ್ಕಾರದ ಕಾರ್ಯದರ್ಶಿ,
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),
ಶಿಕ್ಷಣ ಇಲಾಖೆ.

**ದಿನಾಂಕ 28ನೇ ಏಪ್ರಿಲ್ 2003ರ ಸುತ್ತೋಲೆ ಸಂಖ್ಯೆ: ಇಡಿ:117:ಪಿಜಿಸಿ:2003ಕ್ಕೆ ಲಗತ್ತಿಸಿದ ಅನುಬಂಧ**

ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 48ರ ಉಪ ಸೆಕ್ಷನ್ (1)ಅನ್ನು ಈ ಕೆಳಗೆ ಉದ್ಧರಿಸಿದೆ.-

"**48 Fees.-** (1) Subject to any other law for the time being in force, no Governing Council of a recognized educational institution shall levy or collect any fees or charges or donations or other payments, by whatever name called, save such and at such rate and in such manner as may be prescribed."

2. ಅದರ ಅಡಿಯಲ್ಲಿ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ಕ್ರಮಬದ್ಧತೆ ಹಾಗೂ ಪಠ್ಯಕ್ರಮ ಇತ್ಯಾದಿಯ ನಿಗದೀಕರಣ) ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕೆಲವು ಶುಲ್ಕ ಹಾಗೂ ವಂತಿಗೆಗಳ ಕ್ರಮಬದ್ಧತೆ) ನಿಯಮಗಳು, 1999 ಅನ್ನು ರಚಿಸಲಾಗಿದೆ.

3. 1995ರ ಸದರಿ ನಿಯಮದ ನಿಯಮ 15 ಮತ್ತು 16ರ ಸಂಬಂಧಿಸಿದ ಭಾಗವನ್ನು ಈ ಕೆಳಗೆ ಉದ್ಧರಿಸಿದೆ.-

"**15. Violation of Rules regarding admission fees, or any provisions in the Act or Rules by the Institution.-** (1) Any parent who is aggrieved by,-

(a) Violation of any of the provisions of these rules with respect to admissiona by the institutions;

(b) Violation of any of the provisions of these rules with respect to collection of fees;

may file a petition in writing to the District Level Education Regulating Authority constituted under rule 16.

(2) "The District Regulating Authority may also suo-motu or on complaint made by any person interested orally or otherwise make an enquiry to satisfy themselves as to the correctness of the complaint and may pass orders as it may consider fit, after giving an opportunity to the party adversely affected by it an opportunity of making representation".

**16. Constitution and Functions of District Level Education Regulating Authority.-** (1) There shall be a District Level Education Regulating Authority (hereinafter called the Regulating Authority for every district consisting of the following members, namely:-

| | | |
|---|---|---|
| (a) | Deputy Commissioner of the District | Chairman |
| (b) | Chief Executive Officer Zilla Panchayat | Member |
| (c) | Executive Engineer Zilla Panchayat | Member |
| (d) | Deputy Director Pre-University Education Department of the concerned District | Member |
| (e) | Deputy Director of Public Instruction of the Concerned District | Member Secretary |

2) The State Government may by notification, constitute an Additional Authority in a District ............ Provisions of rules 3 to 8 shall apply mutatis-mutandis to additional Regulating Authority.

3) The terms of reference of the Regulating Authority shall be as follows:-

**(i) Jurisdiction;**

The authority shall have jurisdiction over all the instances pertaining to violation of the rules by the Educational Institutions Consisting of Pre-Primary and Secondary Institutions in a District.

**(ii) Term of reference:**

1. The authority shall have power to investigate into all the instances as contemplated in rule 15".

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ - IV - 2C (i)

[illegible]


## EDUCATION SECRETARIAT
## NOTIFICATION

No. ED 39 ViViDa 99, Bangalore, dated 14-03-2000

Whereas the draft of the Karnataka Educational Institutions (Regulation of certain fees and Donations) Rules 1999 was published as required by sub Section 1 of Section 145 of the Karnataka Education Act 1983 (Karnataka Act 1 of 1995) in Notification No. ED 39 ViViDa 1999 dated 9th August 1999 in part 4 Section 2- C (i) of Karnataka Gazette extraordinary dated 9th August 1999, inviting objections and suggestions from the persons likely to be affected thereby.

Whereas the said Gazette was made available to the public on 9th August 1999.

And whereas the objective of the said rules is to introduce a system of transparency, openness and accountability in the matter of collection of notified fees for admission of students to unaided institutions and to prevent diversion of funds collected for purposes other than school development.

And whereas objections and suggestions received in this regard have been considered by the Government. Now therefore in exercise of the powers conferred by Section 48, 51 read with Section 145 of the Karnataka Education Act 1983(Karnataka Act I of 1995) the Government of Karnataka hereby makes the following rules namely:-

1. Title and Commencement:- (1) These rules may be called the Karnataka Educational Institutions (Regulation of Certain fees and Donations) Rules, 1999.

(2) They shall come into force on the date of their publication in the Official Gazette.

(3) They shall be applicable to all private unaided primary, secondary and pre-university institutions in the state of Karnataka.

2. Definition:- In these rules, unless the context otherwise, requires:-

(c) "Act" means the Karnataka Education Act, 1983(Karnataka Act 1 of 1995).
(d) "Section" means a section of the Act.

3. Regulations of Donations etc:- No donation or voluntary donation or any money by whatever name called, shall be received by the Educational Institution, other than prescribed fee as notified by the management, before, during or after admission and during entire stay of the student in the concerned educational institution, from parents, or any person in connection with such admission. No donation made in connection with any admission shall be construed as voluntary donation, for the purpose of Section 48 and 51 of the Act.

Explanation:- For the purpose of this rule, parents or persons, include (1) brother, sister, guardians, or any relative of student/student's parents) a Company or Association or trust or a firm or society or any other institution by whatever name called, in which the person or the parents have any proprietary rights, or a Manager or director of such institution.

4. Fees in unaided Private Educational Institutions:-(1) Notwithstanding anything contained in any rules made in this behalf and in lieu of tuition fee charged under Rule 10(2)(b)(ii) of the Karnataka Education Institutions (Classification, Regulation Prescription of curricula etc..) Rules 1995, the maximum tuition fee in respect of Private Unaided Educational Institutions shall be fixed taking into consideration the Salary Expenditure on teaching and non-teaching staff plus 30% of the salary expenditure towards contingency and maintenance costs divided by total number of students.

Provided that the salary expenditure includes contribution towards Provident Fund by the management, encashment benefit, LTC/HTC benefits, medical allowance, conveyance allowance, if any, given to the staff of the institution.

Provided further that the total number of students for calculation of the quantum of fees shall be the actual number of students on roll at the end of the previous academic year and the sanctioned intake in respect of approved additional sections, if any, for the ensuing year, namely the year for which the fees is being notified.

And provided further that the above fees shall be collected by the management in addition to the Special Development Fees and Term Fees stipulated in the Karnataka Educational Institutions (Classification, Regulation and Prescription of Curricula) Rules 1995.

(2) The salary expenditure shall be as per the audited account of the management subject to the limitation of pay scales prescribed by Government as well as the prescribed staffing pattern and it has to be cross-verified with reference to Aquittance Roll, Bank Account of the employee and Attendance Register.

5. **Provision for meeting capital expenditure incurred by the Education Institutions:** The management may also collect amounts towards construction and expansion of the building for the school in which the student is studying and for purchase of equipment for establishment of a computer centre/laboratory.

Provided that such amount, duly notified, shall be collected only once at the time of the initial admission of the child to the institution, irrespective of the standard to which the child is admitted and irrespective of the number of years spent in the school.

Provided that collection of amount for construction and expansion of building and for establishment of computer centre shall under no circumstances exceed the total annual tuition fee notified and collected under Rule 4.

6. **Fees for Certificates:**-(1) The following rates of fee are hereby fixed for the categories of certificates in respect of Primary, Secondary Schools and Pre-university Colleges.

| Sl. No. | Type of the Certificate | Issue | Duplicate | Search fee for 3 years |
|---|---|---|---|---|
| 1. | Transfer Certificate | 25-00 | 25-00 | 25-00 |
| 2. | Marks Card | 25-00 | 25-00 | 25-00 |
| 3. | Study Certificate | 25-00 | 25-00 | 25-00 |
| 4. | Character Certificate | 25-00 | 25-00 | 25-00 |
| 5. | Admission Register-extract | 25-00 | 25-00 | 25-00 |
| 6. | Any other Certificates not mentioned above | 25-00 | 25-00 | 25-00 |

(4) The Educational Institutions shall collect the fees as above duly notified by the institution and issue printed receipt to the students or the parents for all the fees or any money by whatever name called, so collected and preserve the duplicate copy for reference and for verification by the Department.

(5) Any money received apart from the fees as prescribed under these rules and special development fees under Karnataka Education institution (Classification, Regulation, prescription of curricula, etc.,) Rules 1995 and subject to provisions in rule-3 shall be deposited in a Scheduled Bank and the fact in each case with details of amount received and details of person (s) from whom it has been received shall be intimated to the Competent Authority as prescribed in Notification No. ED 83 VIVIDa 98 dated 27.8.1998 within ninety days from the date of such acceptance.

By order and in the
Name of the Governor of Karnataka

(H. Hanumanthaiah)
Under Secretary to Government,
Education Department (General).



Printed by The Director of Printing, Stationery & Publications, Government Press, Bangalore

## ANNEXURE-V

(See Rule -3)

## STANDARD STAFFING PATTERN FOR PRIMARY SCHOOLS

The minimum strength that is actual student attendance in each class of the Primary Section from I to Standard VII or from I to IV or from Standard V to VII as the case may be shall be 40 per class. Accordingly for a class of 40 students one post of Primary School teacher shall be sanctioned. However in a Primary school with classes from I to IV or from V to VII if the number of students in each class is less than forty, then a maximum number of two teachers shall be sanctioned for a minimum total student attendance of 80 irrespective of the number of children attending in each class. Further in a primary school with classes from I to VII if the number of students in each class is less than forty then a maximum of 4 posts of Primary School Teachers shall be sanctioned for a minimum total student strength of 160 irrespective of the number of children attending in each class.

## [1][Annexure - VI

(See Rule 3)

The procedure for filling up of the Head Master / Head Mistress in Private Aided High Schools:

i) The post of Head Master / Head Mistress in Private Aided High School shall be filled up by promotion from the cadre of Secondary School Assistant Grade-I. If no eligible Secondary School Assistants Grade-I is available, Secondary School Assistant Grade-II may be considered. Secondary School Assistants Grade-I and Grade-II includes Science, Arts, Language (Kannada, Urdu, Tamil, Marathi, as the case may be) and Hindi Teachers.

ii) Promotion to the post of Head Master or Head Mistress shall be made on the basis of seniority of a teacher, seniority being determined by counting the total number of years of continuous service from the date of entry into the cadre of Secondary School Assistant Grade-I or Grade-II as the case may be and by following Roster Rules, if they are applicable as per the orders issued by the Government in the matter of reservation from time to time. The service rendered in the cadre of Secondary School Assistant Grade-II (Untrained) may be protected for service benefits but shall not be counted for fixing the seniority.

iii) The eligible teacher must be a trained Secondary School assistant and must have put in not less than five years of approved teaching service in the Secondary School.

iv) If the management is running more than one school common seniority based on the date of approval of appointment of the teacher with aid shall be prepared and notified. If the date

1. Inserted by Notification No. ED 64 Vivida 2000 dated 31.1.2001 w.e.f. 1.2.2001.

of approval of appointment of more than one teacher happens to be the same day, the seniority shall be fixed on the basis of date of birth and the person older in age shall become seniority. Such notified common seniority list shall be the basis for making promotion.

Based on the notified seniority list the appointing Authority shall pass a resolution and send suitable proposals for approval to the Competent Authority Viz., The Regional Secretary, Karnataka Secondary Education Examination Board and Ex-officio Joint Director of Public Instruction of the concerned Divisions with all relevant documents relating to seniority, qualification, service register, service particulars of all the teachers, fulfillment of roster rules etc. If the Competent Authority after verifying the records is satisfied that all the requirements prescribed in the rules have been complied with, he may convey approval for promotions of the selected candidates. In case the promotion is not in accordance with the procedure specified under these rules, the Competent Authority may reject the proposal after recording reasons for such rejection in writing. Such approval or rejection shall be conveyed by the Competent Authority within 90 days from the date of receipt of proposal in his office, failing which disciplinary action will be taken against her / him under KCS (CCA) Rules 1957. Candidates shall be promoted by the Appointing Authority only after such approval by the Competent Authority and benefits of fixation of pay of such candidates shall be payable from the actual date of assuming the charge of the promotional post.

vi) The procedure specified above shall also apply to the Minority Institutions except it is not mandatory to consider only the senior most Secondary School Assistant for Promotion as Head Master or Head Mistress.

## Form - I

**(See Rule - 5)**

1. Name of the employee

2. Father name

3. Date of Birth

3. Qualification

4. Date of appointment

5. Nature of appointment - Permanent / Temporary

6. Name of the Post to which appointed

7. Scale of pay

8. Reservation category to which the employee belongs to

9. Whether appointment approved or not

10. Date of approval & reference.

11. If approved, whether it is with aid or without aid details to be furnished.

12. Any other details

Signature of the Head of the Institution

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಶಿ(3) /2003-04 ದಿನಾಂಕ: 25-06-2004

## ಸುತ್ತೋಲೆ

ವಿಷಯ: ಹೆಣ್ಣುಮಕ್ಕಳ ಶಾಲಾ ದಾಖಲಾತಿ ಬಗ್ಗೆ.

ಉಲ್ಲೇಖ: "ಮಗು ಮಧುರ ಕಲಿಕೆ" ಮತ್ತು ವೆಲೊರೆಡ್ ಸಂಸ್ಥೆಗಳ ಮನವಿ ಪತ್ರ ದಿನಾಂಕ: ಜೂನ್ 2004.

&&&

1997ರ 83ನೇ ಸಂವಿಧಾನ ತಿದ್ದುಪಡಿಯು 6 ರಿಂದ 14 ವಯೋಮಿತಿಯ ಎಲ್ಲ ಮಕ್ಕಳಿಗೆ ಶಿಕ್ಷಣವು ಉಚಿತ ಮತ್ತು ಕಡ್ಡಾಯವೆಂದು ಘೋಷಿಸಿದೆ. 2002ರ 93ನೇ ಸಂವಿಧಾನ ತಿದ್ದುಪಡಿ ಮಸೂದೆಯ 86ನೇ ವಿಧೇಯಕವು ಶಿಕ್ಷಣವು ಮಗುವಿನ ಮೂಲಭೂತ ಹಕ್ಕು ಎಂದು ಸಾರಿ, ಶಿಕ್ಷಣದ ಸಾರ್ವತ್ರೀಕರಣಕ್ಕೆ ಒತ್ತು ನೀಡಿದೆ. ಅಷ್ಟೇ ಅಲ್ಲ, 9ನೇ ಯೋಜನೆಯಲ್ಲಿ ಇದನ್ನು ಸವಾಲಾಗಿ ಸ್ವೀಕರಿಸಲು ಸರ್ಕಾರದ ಬದ್ಧತೆಯನ್ನು ಪ್ರಕಟಗೊಳಿಸಿದೆ. ಈ ಎಲ್ಲ ಕ್ರಮಗಳನ್ನು ಕೈಗೊಂಡಿದ್ದರೂ, ಶಾಲೆಯಿಂದ ಹೊರತಾಗಿರುವ ಶಾಲಾ ವಯಸ್ಸಿನ ಮಕ್ಕಳ ಸಂಖ್ಯೆ ಇನ್ನೂ ಗಣನೀಯವಾಗಿಯೇ ಇದೆ. ಇದರಲ್ಲಿ ಹೆಣ್ಣುಮಕ್ಕಳ ಸಂಖ್ಯೆಯೇ ಹೆಚ್ಚು ಎನ್ನುವುದು ವಾಸ್ತವವಾಗಿದೆ. ಅಶಿಕ್ಷಿತ ಕುಟುಂಬಗಳಲ್ಲಿ ತಪ್ಪು ತಿಳುವಳಿಕೆಗಳು, ಬಡತನ, ಜವಾಬ್ದಾರಿಗಳ ಹೊರೆ ಮುಂತಾದ ಕಾರಣಗಳಿಂದ ಹೆಣ್ಣುಮಗುವಿನ ಶಿಕ್ಷಣ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದೆ. ಪರಿಣಾಮವಾಗಿ ಹೆಣ್ಣುಮಗು ಜೀವಮಾನವೆಲ್ಲಾ ಪರಾವಲಂಬಿಯಾಗಿ ಶೋಷಿತವರ್ಗಕ್ಕೆ ತಳ್ಳಲ್ಪಟ್ಟಿದ್ದಾಳೆ, ಈ ಕಾರಣ ಸರ್ಕಾರ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಶುಲ್ಕ ವಿನಾಯಿತಿ ಮುಂತಾದ ಹಲವು ಕಾರ್ಯಕ್ರಮಗಳನ್ನು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ವಿಶೇಷವಾಗಿ ಹಮ್ಮಿಕೊಂಡು, ಹೆಣ್ಣು ಮಗುವಿನ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದೆ. ರಾಜ್ಯ ಸರ್ವಶಿಕ್ಷಾ ಅಭಿಯಾನವೂ ಹೆಣ್ಣುಮಕ್ಕಳ ಶಿಕ್ಷಣಕ್ಕೆ " ಬಾ ಬಾಲೆ ಶಾಲೆಗೆ " ಇತ್ಯಾದಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿದೆ. ಈ ನಿಟ್ಟಿನಲ್ಲಿ "ಮಗು ಮಧುರ ಕಲಿಕೆ" ಮತ್ತು ವೆಲೊರೆಡ್ ಸಂಸ್ಥೆಗಳು ಹೆಣ್ಣುಮಕ್ಕಳ ಶಿಕ್ಷಣ ದಾಖಲಾತಿ ಸಪ್ತಾಹವನ್ನು ಕೈಗೊಂಡಿರುವುದು ಶಿಕ್ಷಣದ ಸಾರ್ವತ್ರೀಕರಣ ಕಾರ್ಯಕ್ರಮಕ್ಕೆ ಪೂರಕವಾಗಿದೆ. 1 ರಿಂದ 7ನೇ ತರಗತಿಯ ವಿದ್ಯಾಭ್ಯಾಸ ಪೂರೈಸುವ ಹೆಣ್ಣುಮಕ್ಕಳು ಪ್ರೌಢ ಶಿಕ್ಷಣವನ್ನು ನಿರಾತಂಕವಾಗಿ, ನಿರ್ವಿಘ್ನವಾಗಿ ಪಡೆಯಲು ಪ್ರೋತ್ಸಾಹಿಸಬೇಕಾಗಿದೆ. ವಿಶ್ವದ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಯೂನಿಸೆಫ್ ಸಹ ಕರೆ ನೀಡಿರುತ್ತದೆ. ಅದರ ಅನುಷ್ಠಾನದ ಕರೆ ಹೀಗಿದೆ: **ಹೆಣ್ಣುಮಕ್ಕಳ ಶಿಕ್ಷಣವು ಒಂದು ಮಹತ್ವದ ಬಂಡವಾಳವಾಗಿದೆ.** ಈ ಎಲ್ಲ ಕಾರಣಗಳಿಂದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿ, ಲಿಂಗ ಅಸಮಾನತೆಯನ್ನು ತೊಲಗಿಸಬೇಕಾಗಿದೆ.

"ಮಗು ಮಧುರ ಕಲಿಕೆ" ಮತ್ತು ವೆಲೊರೆಡ್ ಸಂಸ್ಥೆಗಳು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ಆಂದೋಳನವನ್ನು ಹಮ್ಮಿಕೊಂಡಿವೆ. ಈ ಸಂಸ್ಥೆಗಳು ಕೋರಿರುವಂತೆ ಪ್ರೌಢಶಿಕ್ಷಣ ಪ್ರವೇಶವನ್ನು ಸರಳಗೊಳಿಸುವ ನಿಟ್ಟಿನಲ್ಲಿ 7ನೇ ತರಗತಿಯಲ್ಲಿ ಉತ್ತೀರ್ಣತೆಯನ್ನು ಮಾತ್ರ ಆಧಾರವಾಗಿಟ್ಟುಕೊಳ್ಳಬೇಕೇ ಹೊರತು, ಅಂಕಗಳು ಮಾನದಂಡವಾಗಿರಬಾರದು. ಈ ನಿಯಮವನ್ನು ಪ್ರೌಢಶಾಲೆಗಳ ಮುಖ್ಯ ಶಿಕ್ಷಕರು ತಪ್ಪದೇ ಅನುಸರಿಸುವಂತೆ ತಿಳಿಸಲಾಗಿದೆ. ಹಾಗೂ ಹೆಣ್ಣುಮಕ್ಕಳ ದಾಖಲಾತಿ ಬಗ್ಗೆ ಈ ಸಂಸ್ಥೆಗಳವರು ಇಲಾಖಾಧಿಕಾರಿಗಳನ್ನು ಅಥವಾ ಶಾಲಾ ಮುಖ್ಯಸ್ಥರನ್ನು ಸಂಪರ್ಕಿಸಿದಲ್ಲಿ ತಪ್ಪದೇ ಸಹಕರಿಸುವಂತೆ ಈ ಮೂಲಕ ತಿಳಿಸಿದೆ.

(ಕರಡು ಪತ್ರ ಮಾನ್ಯ ಆಯುಕ್ತರವರಿಂದ ಅನುಮೋದಿಸಲ್ಪಟ್ಟಿದೆ)

25/6

**(ಹೆಚ್.ರಘುರಾಮ ಸೋಮಯಾಜಿ)**

**ನಿರ್ದೇಶಕರು (ಪ್ರೌಢಶಿಕ್ಷಣ)**

ಗೆ,

1. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ.
2. ಮಾನ್ಯ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಈಶಾನ್ಯ ವಲಯ, ಗುಲ್ಬರ್ಗಾ.

**ಪ್ರತಿಯನ್ನು.**

1. ರಾಜ್ಯದ ಎಲ್ಲಾ ಸಹನಿರ್ದೇಶಕರುಗಳಿಗೆ.
2. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.